## ಕೆನಡಾ, ರಷ್ಯಾಗಳಲ್ಲಿ ಬೇಳೆಕಾಳು ಕಟಾವು ಆರಂಭ

ಹಿಂದಿನ ವರ್ಷ ಭಾರತದಲ್ಲಿ ಮಳೆ ಕಡಿಮೆಯಾದ್ದರಿಂದ ಬೇಳೆಕಾಳು ಉತ್ಪಾದನೆ ಕಡಿಮೆಯಾಗಿತ್ತು. ಈಗ ಕೆನಡಾ, ರಷ್ಯಾ ಮುಂತಾದ ರಫ್ತು ಮಾಡುವ ದೇಶಗಳಲ್ಲಿ ಬೇಳೆಕಾಳು ಕಟಾವು ಆರಂಭವಾಗಿದೆಯೆನ್ನಲಾಗಿದೆ. ಅಲ್ಲಿ ಬೇಳೆಕಾಳು ದರದಲ್ಲಿ ಹೆಚ್ಚಳ ಕಂಡುಬಂದಿಲ್ಲವೆನ್ನಲಾಗಿದೆ. ಹಿಂದಿನ ಖಾರಿಫ್ ಬೆಳೆಯಲ್ಲಿ ಏಕರೇಜ್ ಇಳಿಕೆ ಹಾಗೂ ಮಳೆ ಕಡಿಮೆಯಾದ್ದರಿಂದ ಉತ್ಪಾದನೆ ಹಿಂದಿನ ವರ್ಷ ಇದ್ದ 5.63 ಮಿಲಿಯನ್ ಟನ್‌ಗಳಿಂದ

5.56 ಮಿಲಿಯನ್ ಟನ್‌ಗಳಿಗೆ ಇಳಿಕೆಯಾಗಿದೆಯೆನ್ನಲಾಗಿದೆ.

ಆದರೆ ಭಾರತ ಮತ್ತು ಜಾಗತಿಕ ಮಟ್ಟದಲ್ಲಿ ಬೇಳೆಕಾಳು ಕಡಿಮೆಯಿರುವುದರಿಂದ ದರಗಳು ಹೆಚ್ಚಳದಲ್ಲಿರಲಿವೆಯೆಂದು ಆಮದುದಾರರ ಅನಿಸಿಕೆಯಾಗಿದೆ. ಭಾರತ ಈ ವರ್ಷ ದಾಖಲೆ ಪ್ರಮಾಣದ 5 ಮಿಲಿಯನ್ ಟನ್ ಬೇಳೆಕಾಳು ಆಮದು ಮಾಡಲಿದೆಯೆನ್ನಲಾಗಿದೆ. ಭಾರತದ ವ್ಯಾಪಾರಿಗಳು ವಿದೇಶಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಆಮದಿಗೆ ಬುಕ್ ಮಾಡಿದ್ದರಿಂದ ಅಕ್ಟೋಬರ್ 2015 ಮತ್ತು ಜನವರಿ 2016ರ ಅವಧಿಯಲ್ಲಿ 2.5 ಮಿಲಿಯನ್ ಟನ್ ಬೇಳೆಕಾಳು ಆಮದಾಗಿತ್ತೆನ್ನಲಾಗಿದೆ.

ಅಕ್ಟೋಬರ್ ೨೦೧೫ರ ನಂತರ ಹೆಚ್ಚಳವಾದ ಬೇಳೆಕಾಳು ದರ, ಈಗ ಸಗಟು ಮಾರುಕಟ್ಟೆಯಲ್ಲಿ ಇಳಿಕೆಯಾಗಿದೆ, ರಿಟೈಲ್ ಮಾರುಕಟ್ಟೆಯಲ್ಲಿ ಈಗಲೂ ಹಿಂದಿನ ವರ್ಷದ ಈ ಅವಧಿಯಲ್ಲಿದ್ದ ದರಕ್ಕಿಂತ 50 ರಿಂದ 70 ಶೇಕಡಾ ಹೆಚ್ಚಳವಿದೆಯೆನ್ನಲಾಗಿದೆ.